ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 3, July-August 2024, Pp. 161-164
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಡಾ. ರಂಗಾರೆಡ್ಡಿಯವರ ಸಾಹಿತ್ಯದಲ್ಲಿ ಜಾನಪದ ಬಂಡಾಯದ ವಿಭಿನ್ನ ನೆಲೆಗಳು

**ಯಶೋಧ ಎಸ್. ಪಿ**
ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಜಾಜಿನಗರ, ಬೆಂಗಳೂರು.

**Abstract:**
*'ಬಂಡಾಯ ಜಾನಪದ' ಕೃತಿಯು ಡಾ. ರಂಗಾರೆಡ್ಡಿ ಕೋಡಿರಾಂಪುರ ಅವರು ಬರೆದಿರುವ ಜಾನಪದ ಲೇಖನಗಳ ಎರಡನೇ ಪುಸ್ತಕವಾಗಿದೆ. ಲೇಖಕರು ತಮ್ಮ 'ಲಿಖಿತ ಜಾನಪದ' ಕೃತಿ ಪ್ರಕಟವಾದ ಹದಿನಾರು ವರ್ಷಗಳ ನಂತರದಲ್ಲಿ ಈ ಕೃತಿಯನ್ನು ಹೊರತಂದರು. ಬಂಡಾಯ ಜಾನಪದದಲ್ಲಿ ಲೇಖಕರು ವಿಚಾರ ಸಂಕಿರಣಗಳಲ್ಲಿ ಮಂಡಿಸಿರುವ ಹಾಗೂ ಬೇರೆ ಬೇರೆ ಗ್ರಂಥಗಳಿಗಾಗಿ ಬರೆದ ಲೇಖನಗಳ ಸಂಗ್ರಹವಿದೆ. 1980ರಲ್ಲಿ ರಾಜ್ಯಮಟ್ಟದ ಎರಡನೇ ಬಂಡಾಯ ಸಾಹಿತ್ಯ ಸಮ್ಮೇಳನ ವಿಜಾಪುರದಲ್ಲಿ ಜರುಗಿದಾಗ ಶ್ರೀಯುತರು 'ಜನಪದ ಸಾಹಿತ್ಯದಲ್ಲಿ ಬಂಡಾಯದ ಧೋರಣೆ' ಎನ್ನುವ ಪ್ರಬಂಧ ಮಂಡಿಸುತ್ತಾರೆ. ಇದು ಈ ಕೃತಿಯ ಮೊದಲ ಲೇಖನವೂ ಆಗಿರುವುದು ವಿಶೇಷವಾಗಿದೆ ನಂತರದಲ್ಲಿ 'ಜನಪದ ಕಲೆಗಳು ಮತ್ತು ಬಂಡಾಯದ ಸಾಧ್ಯತೆ' ಎನ್ನುವ ವಿಷಯ ಕುರಿತಂತೆ ಕೋಲಾರದಲ್ಲಿ ನಡೆದ ರಾಜ್ಯಮಟ್ಟದ ನಾಲ್ಕನೇ ಬಂಡಾಯ ಸಾಹಿತ್ಯ ಸಮ್ಮೇಳನದಲ್ಲಿ ಮಂಡಿಸಿದರು ಇದು ಅನ್ವೇಷಣೆಯಲ್ಲಿ ಪ್ರಕಟವಾಗುತ್ತದೆ. ಈ ಎರಡೂ ಲೇಖನಗಳು ಇವರನ್ನು ಹೊಸ ದೃಷ್ಟಿಕೋನದತ್ತ ಕೊಂಡೊಯ್ದವು. ಬಂಡಾಯ ಜಾನಪದವು ಹದಿಮೂರು ಲೇಖನಗಳನ್ನು ಒಳಗೊಂಡ ಕೃತಿಯಾಗಿದೆ. ಒಂದೊಂದು ಲೇಖನವು ಭಿನ್ನ ನೆಲೆಗಟ್ಟಿನಲ್ಲಿ ರಚನೆಯಾಗಿವೆ.*

**Keywords:** *ಕನ್ನಡ ಸಾಹಿತ್ಯ, ಜಾನಪದ ಸಾಹಿತ್ಯ, ಬಂಡಾಯ ಜಾನಪದ, ವಿಭಿನ್ನ ನೆಲೆಗಳು*

## ಪೀಠಿಕೆ

ಬಂಡಾಯ ಜಾನಪದದ ಸ್ವರೂಪ ಅದರ ಸಾಮೂಹಿಕ ಅಂಶದಲ್ಲಿದೆ ಯಾವುದೇ ಜನಪದ ಕಲೆಯಾಗಲಿ ಅದು ಇಬ್ಬರಿಗಿಂತ ಹೆಚ್ಚು ಮಂದಿಯನ್ನು ಒಳಗೊಂಡೆ ಪ್ರದರ್ಶನಗೊಳ್ಳುವಂಥ ದ್ದಾಗಿರುತ್ತದೆ. ಇಲ್ಲಿ ಸಾಮೂಹಿಕ ಪಾಲ್ಗೊಳ್ಳುವಿಕೆ, ಸಾಮೂಹಿಕ ದುಡಿಮೆ, ವಿಕೇಂದ್ರೀಕರಣ ಜಾನಪದದ ಮೂಲಭೂತ ತತ್ವವಾಗಿದೆ. ಮೊದಲಿಗೆ ಜಾನಪದದಲ್ಲಿ ಬಂಡಾಯದ ಎಳೆಯನ್ನು 'ಹಲಗಲಿಯ' ಬೇಡರಲ್ಲಿ ನೋಡಬಹುದಾಗಿದೆ.

1857ರ 28ನೆಯ ನಿಶ್ಯಸ್ತ್ರೀಕರಣ ಕಾಯಿದೆಯನ್ನು ಉಲ್ಲಂಘಿಸಿ ಬ್ರಿಟಿಷರ ವಿರುದ್ಧ ಬಂಡಾಯ ಹೂಡಿದ ಹಲಗಲಿಯ ಬೇಡರ ಧೋರಣೆಯು ಜನಪದ ಇತಿಹಾಸದಲ್ಲಿ ಮಹತ್ವದ್ದಾಗಿದೆ. ಈ ಹೋರಾಟವು ಲಾವಣಿಯ ರೂಪದಲ್ಲಿ ದಾಖಲಾಗಿದೆ.

> ***"ವಿಲಾಯಿತಿಯಿಂದ ಹುಕುಮ ಕಳುವಿದರ ಕುಂಪಣಿ ಸರಕಾರಾ***
>
> ***ಎಲ್ಲ ಜನರನಾ ತರಿಸಿ ಜೋರಿ ಮಾಡಿ ತರಬೇಕ ಹತಾರ***

***Please cite this article as:*** ಯಶೋಧ, ಎಸ್. ಪಿ. (2024). ಡಾ. ರಂಗಾರೆಡ್ಡಿಯವರ ಸಾಹಿತ್ಯದಲ್ಲಿ ಜಾನಪದ ಬಂಡಾಯದ ವಿಭಿನ್ನ ನೆಲೆಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್,* 3(3), 161–164

*ಕತ್ತಿ ಕಟಾರಿ ಕೈಚೂರಿ ಬಾಕು ಗುರ್ದಿ ಸುರಾಯಿ ಚಕ್ರಾ*

*ಬಾಲಿಯ ಬರ್ಜಿ ಬಿಚ್ಚುಗತ್ತಿ ನೋಡ ಬಾಣಬಿಲ್ಲಿನವರಾ*

*ಬಹಳ ಚಿಂತಿಯಾಗಿ ದುಃಖದಿಂದ ಅವರು ಬಿದ್ದರಣ್ಣ ನೆಲಕ"*[1]

ಈ ಮೇಲಿನ ಲಾವಣಿಯಲ್ಲಿ ಹಲಗಲಿಯ ಬೇಡರು ಬ್ರಿಟಿಷರ ಕಾಯಿದೆಯನ್ನು ಧಿಕ್ಕರಿಸಿ ಹೋರಾಡಿ ವೀರ ಮರಣವನ್ನಪ್ಪುತ್ತಾರೆ. ಇದು ಅವರಲ್ಲಿನ ಸಂಘಟನೆಯನ್ನು ಎತ್ತಿ ಹಿಡಿಯುತ್ತದೆ ಹಾಗೂ ಅವರ ಅಸ್ತಿತ್ವದ ಪ್ರಶ್ನೆಯೂ ಆಗಿದೆ. ಜಾನಪದದಲ್ಲಿ ಬಂಡಾಯದ ಎಳೆಗಳನ್ನು ಗುರುತಿಸುವುದು ಬೇರೆ ಬಂಡಾಯ ಜಾನಪದವೇ ಬೇರೆ. ಇದನ್ನು ಸಾಹಿತ್ಯಿಕ ಪರಿಭಾಷೆಯಲ್ಲಿ ಸ್ಪಷ್ಟಪಡಿಸುವುದಾದರೆ ಸಾಹಿತ್ಯದಲ್ಲಿ ಪ್ರತಿಭಟನೆಯ ಅಂಶಗಳನ್ನು ಹುಡುಕುವುದು ಬೇರೆ. ಪ್ರತಿಭಟನಾ ಸಾಹಿತ್ಯವೇ ಬೇರೆ ಎಂಬ ಅಂಶವಿದ್ದಂತೆ. ಪ್ರತಿಭಟನಾ ಸಾಹಿತ್ಯ ನಿಶ್ಚಿತ ಉದ್ದೇಶಕ್ಕೆ ಬದ್ಧವಾಗಿರುವ ಸಾಹಿತ್ಯವಾಗಿರುತ್ತದೆ.

ಬಂಡಾಯ ಜಾನಪದದಲ್ಲಿ ಸಣ್ಣ ಸಣ್ಣ ಪಾಳೇಗಾರರು ಜನಪದರ ಮನಸ್ಸಿನಲ್ಲಿ ಗೌರವದ ಸ್ಥಾನ ಪಡೆದವರಾಗಿದ್ದರೂ ಇವರ್‍ಯಾರೂ ಸಾಮ್ರಾಜ್ಯ ವಿಸ್ತರಣಾಕಾಂಕ್ಷಿಗಳಲ್ಲ, ಆದರೆ ತಮ್ಮ ನೆಲ ಜಲ ಮತ್ತು ಜನರನ್ನು ರಕ್ಷಿಸಲು ಹೋರಾಟಕ್ಕಿಳಿದಿದ್ದಾರೆ. ನಮ್ಮ ಜನಪದರ ಸ್ವಾತಂತ್ರಕ್ಕೆ ಆಹಾರೋತ್ಪಾದನೆಗೆ ಅಡ್ಡಿಯಾದಾಗ ಜನಪದ ಸಾಹಿತ್ಯದಲ್ಲಿ ಬಂಡಾಯ ಕಂಡುಬಂದಿದೆ. ಇದು ವೈಯಕ್ತಿಕ ನೆಲೆಯಿಂದಲೂ ನಡೆದಿರಬಹುದು ಅಥವಾ ಸಾಮೂಹಿಕ ನೆಲೆಯದ್ದೂ ಆಗಿರಬಹುದು.

ಉದಾಹರಣೆಗೆ ನೋಡುವುದಾದರೆ ತೆಲಂಗಾಣ ರೈತ ಹೋರಾಟ, ಕಯ್ಯೂರಿನ ರೈತ ಹೋರಾಟ, ಕಾಗೋಡಿನ ರೈತ ಹೋರಾಟಗಳ ಸಂದರ್ಭದಲ್ಲಿ ಹುಟ್ಟಿರುವ ಸಾಹಿತ್ಯ ಬಂಡಾಯ ಜಾನಪದವಾಗಿದೆ.

*ಹಚ್ಚಬ್ಯಾಡ ಹಚ್ಚಬ್ಯಾಡವ್ವಾ*
*ಜೀತಕ್ಕ ನನ್ನನ್ನ*
*ಎಳೆ ಬಾಳೆ ಸುಳಿ ನಾನವ್ವ* [2]

ಎಂದು ಒಂದು ಮಗು ತನ್ನ ಹೆತ್ತವರನ್ನು ಕೇಳುವ ಈ ದೃಶ್ಯ ಕರುಳು ಕೊಯ್ಯುವಂಥ ವೇದನೆ ಕೇಳಿದ ಕೂಡಲೇ ಮನಸ್ಸಿಗೆ ಮುಟ್ಟುತ್ತದೆ. ಸಾಲುಗಳಿಗೆ ಸ್ಫೂರ್ತಿ ನಮ್ಮ ಜನಪದಗೀತೆ ಅದರ ಮೂಲ ಹೀಗಿದೆ.

*ಹಾಕಬ್ಯಾಡ ಹಾಕಬ್ಯಾಡಣ್ಣೋ*
*ಎಲೆ ಬೇಟೆಗಾರಣ್ಣೋ*
*ಹೊಟ್ಟೆಯೊಳಗೆ ಕಂದನಿರುವನೋ*

ಎಂಬ ಕೋಮಲ ಮೃದು ಶರೀರವುಳ್ಳ ಮೊಲದ ಆರ್ತನಾದದ ಕರುಳಿರಿಯುವ ವೇದನೆಯೇ ಮೇಲಿನ ಪದ್ಯದಲ್ಲೂ ಇದೆ.

ಈ ಗೀತೆಯನ್ನು ಅಕ್ಷರ ಆಂದೋಲನಕ್ಕಾಗಿ ಕೋಟಿಗಾನಹಳ್ಳಿ ರಾಮಯ್ಯ ರಚಿಸಿದ್ದಾರೆ.

ಈ ಎರಡೂ ಪದ್ಯದ ರಚನೆಯನ್ನೂ ನೋಡಿದಾಗ Live and let to live ಎಂಬ ಸಿದ್ಧಾಂತದ ಪ್ರತಿಪಾದನೆಯೂ ಇದೆ. ಕೊಲ್ಲುವ ವ್ಯಕ್ತಿಯ ಎದುರು ನಿಂತು ಪ್ರತಿಭಟಿಸುವುದು ಒಂದು ಬಗೆಯಾದರೆ

ಅವನ ಮನಕರಗುವಂತೆ ಮಾಡಿ ಕಾರ್ಯ ವಿಮುಖನನ್ನಾಗಿಸುವುದು ಕೂಡಾ ಪ್ರತಿಭಟನೆಯ ಇನ್ನೊಂದು ವಿಧವಾಗುತ್ತದೆ. ಲೇಖಕರು ಪುಸ್ತಕಕ್ಕೆ 'ಬಂಡಾಯ ಜಾನಪದ' ಎಂದೇ ಹೆಸರಿಡಲು ಕಾರಣಗಳನ್ನು ಕೊಟ್ಟಿದ್ದಾರೆ. ಇವರು ಮೂಲತಃ ನೆಲಮೂಲ ಸಂಸ್ಕೃತಿಯಿಂದ ಬಂದವರಾಗಿದ್ದು ಜೊತೆಗೆ ಜಾನಪದದಲ್ಲಿ ಸದಾ ಬಂಡಾಯ ಮನೋಧರ್ಮವನ್ನು

[1] ರಂಗಾರೆಡ್ಡಿ ಕೋಡಿರಾಂಪುರ, ಬಂಡಾಯ ಜಾನಪದ. ಪು. 3

[2] ಅದೇ. ಪು. 3

ಕಾಣುವವನಾಗಿರುವುದರಿಂದಲೇ ಕೃತಿಗೆ ಈ ಶೀರ್ಷಿಕೆ ಆಕ್ರಮಣ ಚಳುವಳಿಗಳಲ್ಲಿ ಬಹಳ ಮುಖ್ಯವಾದ ನಾಗಸಂದ್ರದ ಘಟನೆ, ಸ್ವಾತಂತ್ರ ಸಂಗ್ರಾಮದ ಕಾಲದ ವಿದುರಾಶ್ವತ್ಥದ ಗೋಲಿಬಾರ್ ಘಟನೆ ವಿರುದ್ಧ ಲಾವಣಿಗಳಿವೆ. ಈ ಎಲ್ಲಾ ಅಮೂಲ್ಯವಾದ ಸಾಂಸ್ಕೃತಿಕ ಸಂಪತ್ತಿನಲ್ಲಿ ಆಳರಸರ ಕೀರ್ತಿಸುವಿಕೆಯೂ ಇಲ್ಲ, ಹೊಗಳುವಿಕೆಯೂ ಇಲ್ಲ ಬದಲಿಗೆ ಊರಿಗಾಗಿ ಬಲಿಯಾದವರು, ಜನಾಂಗಕ್ಕೆ ದುಡಿದವರು, ಬಂಡವಾಳಿಗರ ವಿರುದ್ಧ ತಿರುಗಿಬಿದ್ದವರು, ಅಧಿಕಾರಿಗಳ ದೌರ್ಜನ್ಯಕ್ಕೆ ತುತ್ತಾದವರ ಬಗ್ಗೆ ಪ್ರೀತಿ ಗೌರವಾರ್ಥವಾಗಿ ಜಾನಪದದಲ್ಲಿ ಸ್ಮಾರಕವನ್ನು ನಿರ್ಮಿಸಿದ್ದಾರೆ. ಸಂಗೊಳ್ಳಿ ರಾಯಣ್ಣನ ಸಮಾಧಿ ಸ್ಥಳದಲ್ಲಿ ಆಲದ ಮರವಿರುವುದು, ಸ್ಮಾರಕ ನಿರ್ಮಿಸಿರುವುದು ಕೂಡಾ ಇದಕ್ಕೆ ನಿದರ್ಶನವಾಗಿದೆ ಈ ಎಲ್ಲಾ ಆಶಯಗಳಿಂದಲೇ ಜಾನಪದವನ್ನು ಬಂಡಾಯ ಜಾನಪದವೆಂದು ಕರೆದಿರುವುದು.

**ಜಾನಪದದ ಮೇಲೆ ಆಧುನಿಕತೆಯ ಪ್ರಭಾವ**

ಮೊದಲು ಬಂಡಾಯ ಜಾನಪದದ ಸ್ವರೂಪ ಕುರಿತು ಅವಲೋಕಿಸಲಾಯಿತು. ಪ್ರಸ್ತುತ ಜಾನಪದದ ಮೇಲೆ ಆಧುನಿಕತೆಯ ಪ್ರಭಾವ ಎಷ್ಟರಮಟ್ಟಿಗೆ ಆಗಿದೆ ಎಂಬುದನ್ನು ನೋಡಬೇಕಿದೆ. ಜಾನಪದ ಕಲೆಗಳು ನಶಿಸುತ್ತಿವೆ ಎನ್ನುವುದು ಒಂದು ವಾದವಾದರೆ ಅದೇ ಜಾನಪದ ಆಧುನಿಕ ರೂಪದಲ್ಲಿ ಮರುರೂಪ ಪಡೆಯುತ್ತಿದೆ ಎನ್ನುವುದು ಈ ಲೇಖನದಲ್ಲಿ ಗಮನಿಸಬೇಕಾದ ಅಂಶವಾಗಿದೆ. ಆಧುನಿಕತೆ ಅಥವಾ ನಾಗರಿಕತೆಗಳು ನಮ್ಮ ಜಾನಪದಕ್ಕೆ ನಿಜವಾಗಲು ಮಾರಕ ಎಂದು ಹೇಳುವುದಾದರೆ ನಮಗಿಂತಲೂ ಆಧುನೀಕರಣ ಹಾಗೂ ತಂತ್ರಜ್ಞಾನಕ್ಕೆ ಹೆಸರಾದ ಜಪಾನ್, ಜರ್ಮನಿ ದೇಶಗಳು ಜನಪದ ಕಲೆಗಳಿಗೆ ಹೆಚ್ಚು ಮಹತ್ವ ನೀಡುತ್ತಿವೆ. ರಷ್ಯಾದಂತಹ ಮುಂದುವರೆದ ದೇಶದಲ್ಲಿ ಜನಪದ ಕಲೆಗಳನ್ನು ನಾಗರಿಕ ಸಮಾಜದ ಅವಶ್ಯಕತೆಗಳಿಗನುಗುಣವಾಗಿ ಪರಿವರ್ತಿಸಿಕೊಂಡಿದ್ದಾರೆ. ಫಿನ್‌ಲ್ಯಾಂಡಿನಲ್ಲಿ ಜಾನಪದದ ಬಗ್ಗೆ ಅಪಾರ ಅಧ್ಯಯನಗಳು, ಕ್ಷೇತ್ರ ಕಾರ್ಯಗಳೂ ನಡೆದಿವೆ. ಆದರೆ ನಮ್ಮ ನಾಡಿನಲ್ಲಿ ಜಾನಪದಕ್ಕೂ, ಶಿಷ್ಟ ಸಂಸ್ಕೃತಿ ಸಾಹಿತ್ಯಕ್ಕೂ ಅಪಾರವಾದ ವ್ಯತ್ಯಾಸವಿದೆ. ಜಾನಪದವೆನ್ನುವುದು ಹಳ್ಳಿಗಳಿಗೆ ಸಂಬಂಧಪಟ್ಟಿರುವುದು. ಅವಿದ್ಯಾವಂತರ, ಕೆಳಸ್ತರದ ವ್ಯಕ್ತಿಗಳ ಆಚಾರ, ವಿಚಾರ, ಸಂಪ್ರದಾಯ ನಂಬಿಕೆ ಕಲೆ ಸಾಹಿತ್ಯಗಳು ಮಾತ್ರ ಜಾನಪದ ಎಂಬ ತಪ್ಪು ತಿಳುವಳಿಕೆಯಿರುವುದರಿಂದ ನಮ್ಮ ವಿದ್ವಾಂಸರು ಆಧುನಿಕತೆಯ ಪ್ರಭಾವವನ್ನು ಒಪ್ಪಿಕೊಳ್ಳಲು ಹಿಂಜರಿಯುತ್ತಿದ್ದರೂ ಜಾನಪದವು ಸಮಾಜದ ಉತ್ಪನ್ನವಾದುದರಿಂದ ಸಮಾಜ ಬದಲಾವಣೆ ಯೊಂದಿಗೆ ಅದು ಬದಲಾಗುತ್ತಿರುತ್ತದೆಯೇ ಹೊರತು ವಿದ್ವಾಂಸರ ಅನುಮತಿಗೆ ಕಾದು ಕುಳಿತಿರುವುದಿಲ್ಲ. ಆದ್ದರಿಂದ ಬದಲಾಗುತ್ತಿರುವ ಹಾಗೂ ಬದಲಾಗಲೇಬೇಕಾಗಿರುವ ನಮ್ಮ ಸಮಾಜದಲ್ಲಿ ನಾವು ಜಾನಪದ ಅಧ್ಯಯನದ ವಿಧಾನಗಳನ್ನು ರೂಪಿಸುವಾಗ ಪ್ರಸ್ತುತ ಬದುಕಿನ ಸಂದರ್ಭದಲ್ಲಿ ಈ ಜನಪದ ಅಂಶಗಳು ಪಡೆಯುವ ಕ್ರಿಯಾತ್ಮಕ ಮೌಲ್ಯಗಳನ್ನು ಗಮನಿಸಬೇಕು. ನಮ್ಮ ಜಾನಪದ ಪುರಾಣದ ಯಾವ ಅಂಶವನ್ನು ತೆಗೆದುಕೊಂಡರು ಅದು ವರ್ಣಬೇಧ ವ್ಯವಸ್ಥೆ, ಊಳಿಗಮಾನ್ಯಪದ್ಧತಿ, ಪುರುಷ ಪ್ರಧಾನ ಕುಟುಂಬ ವ್ಯವಸ್ಥೆಯ ಸ್ತ್ರೀಕರಣಕ್ಕೆ ಪೂರಕವಾಗಿರುವುದು ಕಂಡುಬರುತ್ತದೆ. ಭಿನ್ನ ಸಂಸ್ಕೃತಿಗಳ ನಡುವೆ ಸಂಸ್ಕೃತೀಕರಣ ನಡೆದಾಗಲು, ಪರಿಣಾಮದಲ್ಲಿ ಅದು ಮೇಲುಜಾತಿಯ ಮೌಲ್ಯವ್ಯವಸ್ಥೆಯನ್ನೇ ಸ್ಥಿರೀಕರಿಸುವುದು ಕಂಡು ಬರುತ್ತದೆ.

ಉದಾ: ಗಂಗೆ ಗೌರಿ ಜಗಳ, ನಂಜುಂಡ ಚಾಮುಂಡಿ, ರಂಗನಾಥ ಚೌಡಿ, ಚೆಲುವನಾರಾಯಣ ವರನಂದಿ ಇಲ್ಲೆಲ್ಲಾ ಪ್ರೇಮ ಕಾಮದ ವಿಷಯಕ್ಕೆ ವರ್ಣಧರ್ಮವನ್ನು ಮೀರಿದರೂ, ಪುರುಷ ಪ್ರಧಾನ ವ್ಯವಸ್ಥೆ ಬಲಿಷ್ಠವಾಗಿಯೇ ಉಳಿಯುತ್ತದೆ. ಇದೆಲ್ಲವನ್ನೂ ಪುರಾಣದ ಹಿನ್ನೆಲೆಯಲ್ಲಿ ನೋಡುವುದು ಒಂದು ಭಾಗವಾದರೆ ಜನಪದ

ಕಲೆಗಳಾದ ವೀರಗಾಸೆ, ಕರಪಾಲಮೇಳ, ಕರಾವಳಿಯ ಯಕ್ಷಗಾನ, ಮೂಡಲಪಾಯ ಇತ್ಯಾದಿ ಕಲೆಗಳನ್ನು ಹಲವು ಬದಲಾವಣೆಯೊಂದಿಗೆ ಯುವಪೀಳಿಗೆಗೆ ಕಲಿಸಿಕೊಡುವ ಪ್ರಯತ್ನ ನಡೆಯುತ್ತಿದೆ ಆದರೆ ಹರಿಜನರು ವಂಶಪಾರಂಪರ್ಯವಾಗಿ ನುಡಿಸಿಕೊಂಡು ಬಂದಿರುವ ಚರ್ಮ ವಾದ್ಯಗಳ ಬಗ್ಗೆ ವರ್ಣವ್ಯವಸ್ಥೆಯ ಸ್ಥಿರೀಕರಣವನ್ನು ಕಾಣುತ್ತೇವೆ. ಇಂತಹ ಭಿನ್ನತೆಗಳಿಂದಲೇ ಇಂದಿನ ಯುವಪೀಳಿಗೆ ಸಹಜವಾಗಿ ಈ ಕಲೆಗಳ ಬಗ್ಗೆ ತಿರಸ್ಕಾರ ರೂಢಿಸಿಕೊಳ್ಳುತ್ತದೆ. ಒಂದುಕಡೆ ಸಿನಿಮಾದಂತಹ ಆಧುನಿಕ ತಂತ್ರಜ್ಞಾನದ ಕಡೆ ಯುವಪೀಳಿಗೆ ವಾಲುತ್ತಿರುವುದರಿಂದಲೂ ಜಾನಪದ ಕಣ್ಮರೆಯಾಗುತ್ತಿದೆ ಎನ್ನುವ ಕಳವಳವಾದರೆ, ಮತ್ತೊಂದು ಕಡೆ ಸಿನಿಮಾದಲ್ಲಿಯೂ ಇಂದು ಜಾನಪದ ಆಧುನಿಕ ರೂಪತೊಟ್ಟು ಮರುಹುಟ್ಟು ಪಡೆಯುತ್ತಿರುವುದು ಸಮಾಧಾನದ ವಿಷಯವಾಗಿದೆ.

ಹಳ್ಳಿಗಳಲ್ಲಾಗಲಿ, ಪಟ್ಟಣಗಳಲ್ಲಾಗಲಿ ಇಂದು ಕಾಣಿಸಿಕೊಳ್ಳುತ್ತಿರುವ ಬದಲಾವಣೆಯಿಂದ ಯಾಂತ್ರೀಕರಣದಿಂದ ಹೊಸ ಸ್ಥಿತಿಗೆ ಸಂಬಂಧಪಟ್ಟಂತಹ ಗಾದೆಗಳು, ಒಗಟುಗಳು, ಗೀತೆಗಳು, ಜೋಕುಗಳು ಹುಟ್ಟಿಕೊಳ್ಳುತ್ತಿವೆ. ಇವೆಲ್ಲಾ ಆಧುನಿಕತೆಯ ಸ್ಪರ್ಶದ ಸೃಷ್ಟಿಯಾದರೂ ಇಂದೂ ಗ್ರಾಮೀಣ ಭಾಗಕ್ಕಿಂತ ಜಪತಪ, ಅರಳಿಮರ ಸುತ್ತುವ, ಹುತ್ತಕ್ಕೆ ಹಾಲೆರೆಯುವ, ಶನಿದೇವರ ಮುಂದೆ ಎಣ್ಣೆದೀಪ ಹಚ್ಚುವ ಆಚರಣೆಗಳು ಬೆಂಗಳೂರಿನಂತಹ ಮಹಾನಗರಗಳಲ್ಲಿಯೇ ಹೆಚ್ಚಾಗಿ ನಡೆಯುತ್ತಿರುವುದು ಜಾನಪದದ ಅಸ್ತಿತ್ವದ ಕುರುಹುಗಳಾಗಿವೆ. ಹಳ್ಳಿಯವರು ಮಾತ್ರ ಜಾನಪದ ಎನ್ನುವ ನಂಬಿಕೆ ಬದಲಾಗಿ ಕಾಲಘಟ್ಟಗಳಲ್ಲಿ ಮನುಷ್ಯನ ಪರಿವರ್ತನೆಯ, ಬೆಳವಣಿಗೆಯ ಕಾಲವೆಂದು ಗುರ್ತಿಸುವ ಅನಿವಾರ್ಯತೆಗೆ ಬಂದು ನಿಂತಿದ್ದೇವೆ. ಉದಾ: ಉಪ್ಪಿನ ಸತ್ಯಾಗ್ರಹ, ಸಂಗೊಳ್ಳಿರಾಯಣ್ಣನ ದಂಗೆ, ಕಿತ್ತೂರು ಚೆನ್ನಮ್ಮನ ಪ್ರತಿಭಟನೆ, ಆಂಧ್ರದ ತೆಲಂಗಾಣ ರೈತ ಹೋರಾಟ, ಶ್ರೀಕಾಕುಳಂ ರೈತ ಹೋರಾಟಗಳು ಒಬ್ಬೊಬ್ಬರ ಬಾಯಿಯಲ್ಲಿ ಲಾವಣಿ ಪದಗಳಾಗಿ ಪುನರ್‌ಸೃಷ್ಟಿಯಾಗಿವೆ.

**ಪರಾಮರ್ಶನ ಗ್ರಂಥಗಳು**


- ಅರವಿಂದ ಮಾಲಗತ್ತಿ – *ಪುರಾಣ ಜಾನಪದ ಮತ್ತು ದೇಶಿವಾದ*
- ದೇಜಗೌ–*ಜಾನಪದ ಅಧ್ಯಯನ*
- ಕಲಬುರ್ಗಿ, ಎಂಎಂ – ಜಾನಪದ ಮಾರ್ಗ
- ರಂಗಾರೆಡ್ಡಿ ಕೋಡಿರಾಂಪುರ – *ಜಾನಪದ ಸಿದ್ಧಾಂತಗಳು*
- ರಂಗಾರೆಡ್ಡಿ ಕೋಡಿರಾಂಪುರ – *ಬಂಡಾಯ ಜಾನಪದ*